ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ. 201/2018

ಚಾಸಾ- 13, ಪ್ರಾಸಾ -6

| | |
|---|---|
| ಹೆಸರು | ದಿನೇಶ್ ನಾಯ್ಕ್ |
| ತಂದೆಯ ಹೆಸರು | ರಾಮನಾಯ್ಕ್ |
| ವಯಸ್ಸು | 34 ವರ್ಷ |
| ಕೆಲಸ | ಅಂಗಡಿ |
| ವಾಸ | ಬೆಳುವಾಯಿ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 04-09-2023 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಆರೋಪಿ ಗೊತ್ತಿಲ್ಲ . ನನ್ನ ಮಾವನಾದ ನಾರಾಯಣರವರ ಮನೆಯಲ್ಲಿ ಚಿನ್ನಾಭರಣ ಕಳ್ಳತನವಾದ ಹಿನ್ನೆಲೆಯಲ್ಲಿ ಹಲವಾರು ದಿನಗಳ ಹಿಂದೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ . ಸದರಿ ಮಹಜರಗಳನ್ನು ಈಗ ನೋಡುತ್ತಿದ್ದು , ಅವುಗಳನ್ನು ನಿಪಿ-8 ಮತ್ತು ನಿಪಿ-9 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು ನಿಪಿ-9(ಎ) ಎಂದು ಗುರುತಿಸಲಾಯಿತು . ಸದರಿ ಸಮಯದಲ್ಲಿ ಯಾರು ಇದ್ದರು ಎಂದು ಗೊತ್ತಿಲ್ಲ . ಸದರಿ ಮಹಜರುಗಳನ್ನು ಯಾವಾಗ ಮಾಡಿರುತ್ತಾರೆ ಎಂದು ಗೊತ್ತಿಲ್ಲ . ಸದರಿ ಮಹಜರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಹಾಗೂ ಸದರಿ ಮಹಜರನ್ನು ಓದಿ ತಿಳಿದುಕೊಂಡು ಸಹಿ ಮಾಡಿಲ್ಲ . ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ .

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

1. ದಿಃ 22-11-2017 ರಂದು ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ಮೋಟಾರು ಸೈಕಲನ್ನು ಹಾಜರು ಪಡಿಸುವ ಸಮಯ ತಯಾರಿಸಲಾದ ಮಹಜರಿಗೆ ಬೆಳಿಗ್ಗೆ 11-00 ರಿಂದ 11-45 ಗಂಟೆಗೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ . ಆರೋಪಿಯು ಬೊಲ್ಲೆಚಾರು , ಪೂಪಾಡಿ ಕಲ್ಲು ರಸ್ತೆಯ ಉತ್ತರ ದಿಕ್ಕಿಗೆ ಇರುವ ಮನೆಯ ಉತ್ತರ ಬದಿಗೆ ಕರೆದುಕೊಂಡು ಹೋಗಿ ಕಪ್ಪು ಬಣ್ಣದ ಬಜಾಜ್ ಕಂಪನಿಯ ಪಲ್ಸರ್ ಮೋಟಾರು ಸೈಕಲ್ ನಂ. ಕೆಎ-19 ಎಕ್ಸ್ 6926 ನ್ನು ನನ್ನ ಹಾಗೂ ಚಾಸಾ-12 ರವರ ಸಮಕ್ಷಮ ತಯಾರಿಸಲಾದ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ .

2. ಅದೇ ದಿನ ಆರೋಪಿಯೇ ಮೊಬೈಲ್ ಕಳ್ಳತನ ಮಾಡಿದ ಬಗ್ಗೆ ಮಾರ್ಪಾಡಿ ಗ್ರಾಮದ ವೆಂಕಟರಮಣ ದೇವಸ್ಥಾನದ ನಿರ್ಮಾಣ ಹಂತದಲ್ಲಿ ಇರುವ ಕಟ್ಟಡದಲ್ಲಿ ಆರೋಪಿ ಸರ್ಕಾರಿ ಆಸ್ಪತ್ರೆಯ ಬಳಿ ಮೊಬೈಲಗಳನ್ನು ಕಳವು ಮಾಡಿದ ಬಗ್ಗೆ ಸ್ಥಳವನ್ನು ತೋರಿಸಿ ಕೊಡುವ ಸಂದರ್ಭ ನನ್ನ ಹಾಗೂ ಚಾಸಾ-12 ರವರ ಸಮಕ್ಷಮ ಸಮಯ 12-30 ರಿಂದ 1-30 ಗಂಟೆಯವರೆಗೆ ತಯಾರಿಸಲಾದ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ . ಸದರಿ ಸಮಯ ಆರೋಪಿ ಇದ್ದರು ಎಂದರೆ ಸರಿ . ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ .

ಪಾಟೀಸವಾಲುಃ  ಆರೋಪಿ ಪರ ವಕೀಲರಾದ ಶ್ರೀ  ಎಸ್.ಎಸ್.ಡಿ      ರವರಿಂದಃ

1. ನನ್ನ ಮಾವ ನಾರಾಯಣ ನಾಯ್ಕ ರವರು ನನ್ನ ಒಡವೆಗಳು ಸಿಕ್ಕಿವೆ ಪೊಲೀಸ್ ಠಾಣೆಗೆ ಬನ್ನಿ  ಎಂದು ತಿಳಿದ ಮೇರೆಗೆ ಠಾಣೆಗೆ ಹೋಗಿರುತ್ತೇನೆ . ಅಲ್ಲಿ ಒಡವೆಗಳನ್ನೆಲಾ ನಾರಾಯಣ ನಾಯ್ಕ ರವರಿಗೆ ನೀಡಿದ ಮಹಜರ್ ಮಾಡಿ, ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ .  ಸಹಿಯನ್ನು ಹಾಕಿದ ನಂತರ ನಾನು ಮನೆಗೆ ಹೋಗಿರುತ್ತೇನೆ , ಅದನ್ನು ಹೊರತು ಪಡಿಸಿ ನನಗೆ ಬೇರೇನೂ ಗೊತ್ತಿಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ